ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯದಲ್ಲಿ, ಮುಳಬಾಗಿಲು
ಸಿ.ಸಿ.ಸಂಖ್ಯೆ: 1922/2024

| | | |
|---|---|---|
| ಸಾಕ್ಷಿದಾರರ ಹೆಸರು | ಎಂ. ಅಮರನಾರಾಯಣ | ಸಿ.ಡಬ್ಲ್ಯೂ: 17 |
| ತಂದೆಯ ಹೆಸರು | ಲೇಟ್ ಮುನಿನಾರಾಯಣಪ್ಪ | ಪಿ.ಡಬ್ಲ್ಯೂ: 7 |
| ವಯಸ್ಸು | 62 ವರ್ಷ | |
| ಉದ್ಯೋಗ | ನಿವೃತ್ತ ಪಿಎಸ್ಐ | |
| ವಾಸಸ್ಥಳ | ಕೋಲಾರ | |

ಪ್ರಮಾಣ ವಚನ ಬೋಧಿಸಲಾಯಿತು. ದಿ:30.12.2024

ಮುಖ್ಯ ವಿಚಾರಣೆ: ಸಸ.ಅ.ರವರಿಂದ: /

ದಿ: 07.05.2022 ರಿಂದ ದಿ: 31.12.2023 ರವರೆಗೆ ನಂಗಲಿ ಠಾಣೆಯಲ್ಲಿ ಪಿಎಸ್ಐ ಆಗಿ ಕೆಲಸ ಮಾಡಿರುತ್ತೇನೆ. ದಿ: 02.11.2023 ರಂದು ಮದ್ಯಾಹ್ನ 3.00 ಗಂಟೆಗೆ ಚಾಸಾ 1 ರವರು ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊ. ಸಂಖ್ಯೆ 218/2023 ರಲ್ಲಿ ಪ್ರಕರಣ ದಾಖಲಿಸಿ ಪ್ರ..ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾದಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. .ಅದೇ ದಿನ ಕೃತ್ತ ಸ್ಥಳಕ್ಕೆ ಬೇಟಿ ನೀಡಿ ಚಾಸಾ 5 ವತ್ತು 6 ರವರ ಸಮಕ್ಷಮ ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ಜರುಗಿಸಿ ಅಪಘಾತಕ್ಕೆ ಒಳಗಾದ ಎಪಿ-39-ಯುಕೆ 9679 ಅಶೋಕ್ ಲೇಲ್ಯಾಂಡ್ ಕಂಪನಿಯ ಗೂಡ್ಸ್ ವಾಹನ ಮತ್ತು ದ್ವಿ ಚಕ್ರ ವಾಹನದ ಸಂಖ್ಯೆ ಕೆಎ 05 ಇಕ್ಯೂ -1955 ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಐಎಂವಿ ವರದಿಗಾಗಿ ಮನವಿ ಸಲ್ಲಿಸಿ ವರದಿ ಪಡೆದಿರುತ್ತೇನೆ. ಗೂಡ್ಸ್ ವಾಹನದ ಮಾಲೀಕರಿಗೆ ನೋಟೀಸ್ ಜಾರಿ ಮಾಡಿರುತ್ತೇನೆ. ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ.ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 18 ರವರಿಗೆ ನೀಡಿರುತ್ತೇನೆ. ನಿಪಿ1 ಮತ್ತು 2 ರಲ್ಲಿ ತನ್ನ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ನಿಪಿ1(ಬಿ) ಮತ್ತು

ನಿಪಿ2(ಡಿ ) , ಪ್ರ.ವ.ವರದಿಯನ್ನು ನಿಪಿ9 ಸಹಿಯನ್ನು ನಿಪಿ9(ಎ), ಕಚ್ಚಾ ನಕಾಶೆಯನ್ನು ನಿಪಿ 10, ಸಹಿಯನ್ನು ನಿಪಿ 10(ಎ), ಐಎಂವಿ ವರದಿಯನ್ನು ನಿಪಿ 11, ಸಹಿಯನ್ನು ನಿಪಿ 11(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ3 ರಿಂದ 8 ಅನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಸಿ ಬಿಎ ವಕೀಲರಿಂದಃ**

ಚಾಸಾ 1 ರವರೊಂದಿಗೆ ಯಾರು ಬಂದಿರುತ್ತಾರೆ ಎಂದರೆ ಅವರೊಬ್ಬರೇ ಬಂದಿರುತ್ತಾರೆ. ನಿಪಿ1 ಅನ್ನು ಯಾರು ತಯಾರಿಸಿರುತ್ತಾರೆ ಎಂದರೆ ಚಾಸಾ 1 ರವರು ಅವರೇ ತಯಾರಿಸಿರುತ್ತಾರೆ. ನಿಪಿ1 ರಲ್ಲಿರುವ ವಿಚಾರಗಳು ಚಾಸಾ 1 ರವರಿಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ಅನ್ನುನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋದಾಗ ಚಾಸಾ 1 ರವರನ್ನು ಕರೆಸಿಕೊಂಡು ಸ್ಥಳವನ್ನು ತೋರಿಸಿಕೊಂಡಿರುತ್ತೇನೆ. ಸ್ಥಳಕ್ಕೆ ನಾನು ಮತ್ತು ಕಂಪ್ಯೂಟರ್ ಆಪರೇಟರ್ ಹೋಗಿರುತ್ತೇವೆ. ಸಮವಸ್ತ್ರದಲ್ಲಿರುತ್ತೇವೆ. ಘಟನಾ ಸ್ಥಳಕ್ಕೆ ಹೋದಾಗ ಎಷ್ಟು ಜನ ಇದ್ದರು ಎಂದರೆ ಚಾಸಾ 1, 5 ಮತ್ತು 6 ರವರು ಇದ್ದರು. ಘಟನಾ ಸ್ಥಳ ಜನ ನಿಬಿಡ ಸ್ಥಳ ಎಂದರೆ ನಾವು ಸ್ಥಳದಲ್ಲಿದ್ದಾಗ ಯಾರೂ ಇರಲಿಲ್ಲ. ನಿಪಿ 2 ಅನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 10 ಅನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ವಾಹನಗಳನ್ನು ಠಾಣೆಗೆ ಹೇಗೆ ತಂದಿರುತ್ತೀರಾ ಎಂದರೆ ಬೇರೆ ಚಾಲಕರ ಮೂಲಕ. ಸದರಿ ಚಾಲಕನ ಹೆಸರು ಮುನಿಯಪ್ಪ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 3 ರಿಂದ 8 ಅನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಗುರುತಿಸುವಿಕೆಯ ಬಗ್ಗೆ ಮಾಹಿತಿ ಸಿಕ್ಕಿತ್ತಾ ಎಂದರೆ ಇಲ್ಲ , ನನಗೆ ಸಿಕ್ಕಿರುವುದಿಲ್ಲ.

(ಮರು ವಿಚಾರಣೆ ಇಲ್ಲ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಹಿ/-

(ಶ್ರೀಮತಿ ಸ್ನೇಹಾ ಎಂ.)

ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,